ಆ) ವಿಷಯ: ಮೈಸೂರು ಮಧ್ಯಭಾಗದಲ್ಲಿ ಮಾರುಕಟ್ಟೆಯನ್ನು ಮುಂದುವರಿಸುತ್ತಿರುವ ಬಗ್ಗೆ.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಸಭಾಧ್ಯಕ್ಷರೇ, ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಸಮಸ್ಯೆ ಮತ್ತು ದುರಂತ. ಮೈಸೂರು ನಗರದ ಬಂಡೀಪಾಳ್ಯದಲ್ಲಿ ಸುಸಜ್ಜಿತ ಮಾರುಕಟ್ಟೆ ಇದ್ದರೂ ಸಹ ಮೈಸೂರು ನಗರದ ಮಧ್ಯಭಾಗದಲ್ಲಿ ಮಾರುಕಟ್ಟೆಯನ್ನು ಮುಂದುವರೆಸಿಕೊಂಡು ಹೋಗಿ ಅಲ್ಲಿ ಎಲ್ಲಿಯೂ ಇಲ್ಲದಂಥ ಟ್ರಾಫಿಕ್ ಜಾಮ್ ಆಗಿ ಅನೇಕ ಸಾವುಗಳಾಗಿವೆ.

ಶ್ರೀ ಎ.ರಾಮದಾಸ್: ಮಾನ್ಯ ಗುರುಸ್ವಾಮಿಯವರೇ, ಇಲ್ಲಿ ಕೃಷಿಮಂತ್ರಿಗಳು ಇಲ್ಲ. ನೀವು ಯಾರ ಗಮನವನ್ನು ಸೆಳೆಯುತ್ತಿದ್ದೀರಿ?

ಶ್ರೀ ಆರ್.ವಿ.ದೇಶಪಾಂಡೆ: ಅವರು ಆ ಸದನದಲ್ಲಿ ಇದ್ದಾರೆ.

ಶ್ರೀ ಅಪ್ಪಾಜಿ ಎಸ್.ನಾಡಗೌಡ: ಮಾನ್ಯ ಕೃಷಿ ಸಚಿವರು ಮೇಲ್ಮನೆಯಲ್ಲಿ ಉತ್ತರ ಕೊಡುತ್ತಿದ್ದಾರೆ. ಆದ್ದರಿಂದ ಇದನ್ನು ಆಮೇಲೆ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ಆ ಸದನದಲ್ಲಿ ಇದ್ದಾರಂತೆ. ಇದನ್ನು ಆಮೇಲೆ ತೆಗೆದುಕೊಳ್ಳೋಣ. ಮುಂದಿನ ಗಮನ ಸೆಳೆಯುವ ಸೂಚನೆ ಶ್ರೀ ಜಗದೀಶ ಶೆಟ್ಟರ್ ಅವರದ್ದು.

ಶ್ರೀ ಜಗದೀಶ ಶೆಟ್ಟರ್: ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಇದು ಅವರ ಗಮನ ಸೆಳೆಯುವಂಥಾದ್ದು ಇದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಇಲ್ಲ, ಆದರೆ ಕಾನೂನು ಮಂತ್ರಿ ಶ್ರೀ ಚಂದ್ರೇಗೌಡ ಅವರು ಇದ್ದಾರೆ. ನೀವು ಹೇಳಿ.

ಇ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ''ಸಿ'' ಗುಂಪಿನ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ಖಾಯಂ ಗೊಳಿಸುವ ಬಗ್ಗೆ.

ಶ್ರೀ ಜಗದೀಶ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಸರ್ಕಾರದ ವಿವಿಧ ಇಲಾಖೆಗಳಲ್ಲಿ 'ಸಿ' ಗುಂಪಿನ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ಇದುವರೆಗೂ ಖಾಯಂಗೊಳಿಸಿಲ್ಲ. ಅವರನ್ನು ಖಾಯಂಗೊಳಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನಾನು ಅವರ ಈ ಹೇಳಿಕೆಯನ್ನು ಓದುತ್ತೇನೆ.

ಸರ್ವೋನ್ನತ ನ್ಯಾಯಾಲಯದ ದಿನಾಂಕ 23-2-90ರ ಅಂತಿಮ ತೀರ್ಪಿನ ಪ್ರಕಾರ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1-7-84ರಂದು ಅಥವಾ ಅದಕ್ಕಿಂತ ಮುಂಚೆ ನೇಮಕಾತಿ ಹೊಂದಿರುವ ಸಾಂದರ್ಭಿಕ : ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಕುರಿತು ದಿನಾಂಕ 6-8-90ರ ಸರ್ಕಾರಿ ಆದೇಶದಲ್ಲಿ ಸೂಚನೆಗಳನ್ನು ನೀಡಲಾಗಿದೆ. ದಿನಾಂಕ 6-8-90ರ ಆದೇಶದ ಪ್ರಕಾರ ಅರ್ಹ ನೌಕರರನ್ನು ಸಕ್ರಮಗೊಳಿಸಲು ಸಕ್ರಮ ಖಾಲಿ ಹುದ್ದೆಗಳು ಲಭ್ಯವಿಲ್ಲದ ಪ್ರಕರಣಗಳಲ್ಲಿ ಸೂಪರ್‌ನ್ಯೂಮರರಿ ಹುದ್ದೆಗಳನ್ನು ಸೃಜಿಸಿ ಇವರ ಸೇವೆಯನ್ನು ಸಕ್ರಮಗೊಳಿಸಲಾಗಿದೆ.

ಮೇಲ್ಕಂಡ ದಿನಾಂಕ 6-8-90ರ ಆದೇಶದ ಪ್ರಕಾರ, ಸೂಪರ್‌ನ್ಯೂಮರರಿ ಹುದ್ದೆಗಳನ್ನು ಸೃಜಿಸಿ ಸಕ್ರಮಗೊಳಿಸಲಾದ ನೌಕರರನ್ನು ಅದೇ ಇಲಾಖೆಯಲ್ಲಿ ಇರುವ ಅಥವಾ ಇತರೆ ಇಲಾಖೆಗಳಲ್ಲಿ ಖಾಲಿ ಇರುವ ಸಮಾನ ವೇತನ ಶ್ರೇಣಿಯನ್ನು ಹೊಂದಿರುವ ಸಮಾನ ವೃಂದದ ಹುದ್ದೆಗೆ ಮರು ವಿನ್ಯಾಸಗೊಳಿಸುವ ಕುರಿತು ದಿನಾಂಕ 8-9-1992ರ ಸರ್ಕಾರಿ ಆದೇಶದಲ್ಲಿ ಸೂಚನೆಗಳನ್ನು ನೀಡಲಾಗಿದೆ.

ದಿನಾಂಕ 23-11-95ರ ಸರ್ಕಾರಿ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಮಿತಿಯು, ಸೂಪರ್‌ನ್ಯೂಮರರಿ ಹುದ್ದೆಯಲ್ಲಿ ಇರುವ ನೌಕರರನ್ನು ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಗುರುತಿಸಿ ಜೇಷ್ಠತೆಯ ಆಧಾರದ ಮೇಲೆ ಹಂಚುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಈ ಬಗ್ಗೆ ದಿನಾಂಕ 11-4-97ರ ಸರ್ಕಾರಿ ಆದೇಶದಲ್ಲಿ ಸೂಚನೆಗಳನ್ನು ಕೆಲವು ಮಾರ್ಪಾಡಿನೊಂದಿಗೆ ಪುನರುಚ್ಚರಿಸಲಾಗಿದೆ. ಸಂಬಂಧಿಸಿದ ವಿಭಾಗಾಧಿಕಾರಿಗಳು ಸಹ ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಮೇಲ್ಕಂಡ ಆದೇಶಗಳಲ್ಲಿ ಸೂಚಿಸಲಾಗಿದೆ. ಸದರಿ ನೌಕರರನ್ನು ಅವರವರ ಇಲಾಖೆಯಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆಯೇ ಹಂಚಲು ಯಾವುದೇ ಅಡಚಣೆ ಇರುವುದಿಲ್ಲ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಸುಪ್ರೀಂ ಕೋರ್ಟಿನ ನಿರ್ಣಯದ ಪ್ರಕಾರ, 1-7-84ರಂದು ಅಥವಾ ಅದಕ್ಕಿಂತ ಮುಂಚೆ ಇದ್ದಂಥ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಸಲುವಾಗಿ ತಾವು ಮಾಡಿದ್ದೀರಿ. ಆಮೇಲೆ ಸೂಪರ್‌ನ್ಯೂಮರರಿ ಹುದ್ದೆಗಳು ಎಂದು ಸೃಜಿಸಿ ಸಕ್ರಮಗೊಳಿಸಿದ ನೌಕರರನ್ನು ಅದೇ ಇಲಾಖೆಯಲ್ಲಿ ಅಥವಾ ಬೇರೆ ಇಲಾಖೆಯಲ್ಲಿ

ಖಾಲಿ ಇರುವ ಹಾಗೂ ಸಮಾನ ವೇತನ ಶ್ರೇಣಿ ಹೊಂದಿರುವ, ಸಮಾನ ವೃಂದದ ಹುದ್ದೆಗೆ ಮರು ನಿಯೋಜಿಸುವ ಕುರಿತು 1992ರಲ್ಲಿ ಸರ್ಕಾರಿ ಆದೇಶವಾಗಿದೆ ಎಂದು ತಾವು ಹೇಳಿದಿರಿ. ಆದರೆ, ಈ ''ಸಿ'' ಗುಂಪಿನ ಹುದ್ದೆಗಳು, ಬಹುಶಃ ನನಗನ್ನಿಸಿದ ಮಟ್ಟಿಗೆ ಕಳೆದ 15 ವರ್ಷಗಳಿಂದ ಯಾವ ಯಾವ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಆ ಇಲಾಖೆಗಳಿಗೇ ಅವರ ಹುದ್ದೆಗಳನ್ನು ಕೊಡುವಂಥಾದ್ದು ಇನ್ನೂ ಆಗಿಲ್ಲ. ಇವತ್ತು ಹತ್ತಾರು ಸಾವಿರ ಸಂಖ್ಯೆಯಲ್ಲಿ ಈ ''ಸಿ'' ಗುಂಪಿನ ನೌಕರರು ಇದ್ದಾರೆ. ಇವರಿಗೆ ವೇತನ ಇರಬಹುದು ಅಥವಾ ಬೇರೆ ಬೇರೆ ಏಜೆನ್ಸಿ ಇರಬಹುದು. ನೀವು ಇವರನ್ನು ಖಾಯಂ ಮಾಡಿದಿರಿ, ಆದರೆ ಸೂಪರ್‌ನ್ಯೂಮರರಿ ಎಂದು ಅವರಿಗೆ ರೆಕಗ್ನಿಷನ್ ಕೊಟ್ಟಿರಿ. ಆದರೆ, ಅವರಿಗೆ ಬೇರೆ ಬೇರೆ ಖಾಲಿ ಇದ್ದಂತಹ ಹುದ್ದೆಗಳಿಗೆ ತುಂಬುವಂತಹ ಕೆಲಸ ಇನ್ನೂ ಆಗಲಿಲ್ಲ. ಇವತ್ತು ಲೋಕೋಪಯೋಗಿ ಇಲಾಖೆ ಇರಬಹುದು, ರೇಷ್ಮೆ ಇಲಾಖೆ ಇರಬಹುದು, ಎಲ್ಲಿಯವರೆಗೆ ನೀವು ಅವರನ್ನು ಆ ಇಲಾಖೆಯಲ್ಲಿ ಅಡಾಪ್ಟ್ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ, ಅವರಿಗೆ ಸರ್ಕಾರಿ ನೌಕರರಿಗೆ ಸಿಗುವ ಯಾವುದೇ ಸೌಲಭ್ಯಗಳು ಸಿಗುವುದಿಲ್ಲ, ವೇತನ ಸಿಗುವುದಿಲ್ಲ. ಹೀಗಾಗಿ ಹತ್ತಾರು ಸಾವಿರ ಈ ''ಸಿ'' ಗುಂಪಿನ ನೌಕರರು ಇನ್ನೂವರೆಗೆ ಪರಿತಪಿಸುತ್ತಿದ್ದಾರೆ, ಸಂಕಷ್ಟದಲ್ಲಿದ್ದಾರೆ. ಅದಕ್ಕಾಗಿ ಇದರ ಬಗ್ಗೆ ತೀವ್ರವಾದ ಗಮನವನ್ನು ಕೊಟ್ಟು ಕ್ರಮ ತೆಗೆದುಕೊಳ್ಳಬೇಕು ಮತ್ತು 11-4-97ರ ನಂತರ ಈ ಹುದ್ದೆಗಳನ್ನು ಇಲ್ಲಿಯವರೆಗೂ ಸಕ್ರಮಗೊಳಿಸಿಲ್ಲ. ಕೆಲವು ವಿಭಾಗಾಧಿಕಾರಿಗಳು, ಕೆಲವು ಕಡೆ ಇದ್ದಂಥ ಸೂಪರ್‌ನ್ಯೂಮರರಿ ನೌಕರರನ್ನು ವಜಾ ಮಾಡಿದ ಉದಾಹರಣೆಗಳು ಕಂಡುಬಂದಿವೆ. ಹೀಗಾಗಿ, ಇದರ ಬಗ್ಗೆ ತಾವು ನಿಗಾ ವಹಿಸಬೇಕು. ಇವರಿಗೆ ಯಾವುದಾದರೊಂದು ಇಲಾಖೆಯನ್ನು ನಿಗದಿ ಮಾಡಿ. ಏಕೆಂದರೆ, ಸೂಪರ್‌ನ್ಯೂಮರರಿ ಎಂದರೆ ಇವರಿಗೆ ಯಾವುದೇ ನಿರ್ದಿಷ್ಟವಾದ ಇಲಾಖೆ ಇಲ್ಲ. ಬೇರೆ ಬೇರೆ ಇಲಾಖೆಗೆ ಅವರನ್ನು ಹಂಚುವಂಥಾದ್ದು, ಮತ್ತು ಯಾವುದೇ ಸಂದರ್ಭದಲ್ಲಿ ತೆಗೆದು ಹಾಕುವಂಥಾದ್ದು ಇವೆಲ್ಲಾ ನಡೆಯುತ್ತಾ ಇದೆ. ಅದಕ್ಕಾಗಿ ಇವರಿಗೆ ಯಾವುದಾದರೊಂದು ಇಲಾಖೆಯನ್ನು ನಿಗದಿ ಮಾಡಿ. ಆಗ ಅವರಿಗೆ ಅನುಕೂಲವಾಗುತ್ತದೆ ಮತ್ತು ವೇತನ ಮತ್ತು ಇತರೆ ಸೌಲಭ್ಯಗಳು ಸಿಗಲಿಕ್ಕೆ ಸಾಧ್ಯವಿದೆ.

ಶ್ರೀ ಡಿ.ಜಿ.ಚಂದ್ರೇಗೌಡ: ಮಾನ್ಯ ಸಭಾಧ್ಯಕ್ಷರೇ, ಇದು ಧಾರವಾಡ ಕೇಸ್ ಎಂದೇ ಪ್ರಖ್ಯಾತಿ. ಇದು 23-2-90ಕ್ಕೆ ಏನು ಜಡ್ಜ್‌ಮೆಂಟ್ ಬಂತು, ಅದರಲ್ಲಿ ಕಟಾಫ್ ಡೇಟ್ 1-7-74ಕ್ಕೆ ಕೊಟ್ಟರು. ಅವರು ಎಷ್ಟು ಎಂದು ಹೇಳಿದರೆ ನಲವತ್ತೆಂಟು ಸಾವಿರ ಜನ ಈ ಜಡ್ಜ್‌ಮೆಂಟಿನ ವ್ಯಾಪ್ತಿಯಲ್ಲಿ ಬರತಕ್ಕಂತಹವರು. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ರಸ್ತೆ ಕಾಯುವುದಕ್ಕೆ ಈ ಗ್ಯಾಂಗ್‌ಮನ್‌ಗಳು ಎಂದು ಇದ್ದರು. ವಿಶೇಷವಾಗಿ ಮಲೆನಾಡು ಭಾಗದಲ್ಲಿ ಚರಂಡಿ, ರಸ್ತೆ ನಿರ್ವಹಣೆ ಮಾಡುವವರು

ಇದ್ದಾರೆ. ಈಗ ಅವರನ್ನೆಲ್ಲಾ ಖಾಯಂ ಮಾಡಿ ಎಂದರೆ, ಅವರನ್ನು ರಸ್ತೆಯಿಂದ ತೆಗೆದುಕೊಂಡು ಬಂದು ಬೀದಿಗೆ ಹಾಕಿದ್ದೇವೆ. ಎಲ್ಲಾ ಆಫೀಸುಗಳಲ್ಲಿ ಅವರ ಜವಾನಿಕೆ, ಬಾಗಿಲು ಕಾಯುವ ಕೆಲಸ. ಒಂದೇ ಇಲಾಖೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಒಮ್ಮೆಗೇ ಕೊಡುವುದಕ್ಕೆ ಸಾಧ್ಯವಾಗದಿರುವುದರಿಂದ ಸೂಪರ್‌ನ್ಯೂಮರರಿ ಹುದ್ದೆಗಳಲ್ಲಿ ಸುಮಾರು 13,345 ಜನರನ್ನು, ಅದರ ಪೈಕಿ ಖಾಲಿ ಹುದ್ದೆಗಳಲ್ಲಿ ಮರು ಏನ್ಯಾಸಗೊಳಿಸಿದ್ದು 6,207. ಇನ್ನೂ ಬಾಕಿ ಇರುವ ಸಂಖ್ಯೆ 7,138. ಈ 48 ಸಾವಿರ ಜನರನ್ನು ಹೊಂದಿಸುವುದಕ್ಕೆ ಆಯಾ ಇಲಾಖೆಗಳಿಗೆ ಕೊಡುವುದಕ್ಕೆ ಕಷ್ಟವಾಗಿದ್ದ ಸಂದರ್ಭದಲ್ಲಿ ಸಾಕಷ್ಟು ನೌಕರಿಗಳು ಇಲ್ಲದೇ ಇದ್ದಾಗ ಸೂಪರ್‌ನ್ಯೂಮರರಿ ಪೋಸ್ಟ್‌ಗಳನ್ನು ನಿರ್ಮಾಣ ಮಾಡಿದ್ದೇವೆ. ಎಲ್ಲೆಲ್ಲಿ ಆಯಾ ಇಲಾಖೆಯಲ್ಲಿ ಖಾಲಿ ಇದೆಯೋ ಅಲ್ಲೆಲ್ಲಾ ಭರ್ತಿ ಮಾಡುತ್ತಾ ಬಂದಿದ್ದೇವೆ. ಎಲ್ಲಿ ಖಾಲಿ ಇಲ್ಲವೋ ಅಂತಹ ಕಡೆಗಳಲ್ಲಿ ಸೂಪರ್ ನ್ಯೂಮರರಿ ಪೊಸಿಷನ್ ಹಾಕಿ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಅಕಾಮಡೇಟ್ ಮಾಡುತ್ತಾ ಬಂದಿದ್ದಾರೆ. ಈಗ ಯಾವ ರೀತಿ ಮಾಡಬೇಕು? ತಾವು ಸಲಹೆ ಕೊಟ್ಟ ಹಾಗೆ ಅವರನ್ನು ಆಯಾ ಇಲಾಖೆಗೆ ಕಳುಹಿಸುವುದು ಹೇಗೆ? ಈ ಸಂಬಂಧವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ. ಜಿಲ್ಲಾಧಿಕಾರಿಗಳು ಈ ಸಮಿತಿಯ ಚೇರ್ಮನ್ ಆಗಿರುತ್ತಾರೆ. ಜಿಲ್ಲಾ ಪಂಚಾಯ್ತಿಯ ಸಿ.ಇ.ಓ.ರವರು ಸದಸ್ಯರಾಗಿರುತ್ತಾರೆ. ಜಿಲ್ಲಾಮಟ್ಟದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಮೆಂಬರ್ ಸೆಕ್ರಟರಿ ಆಗಿರುತ್ತಾರೆ. ಅವರು, ಆಯಾ ಇಲಾಖೆಯಲ್ಲಿ ಸಂದರ್ಭೋಚಿತವಾಗಿ ಹುದ್ದೆಗಳು ಖಾಲಿಯಾಗುತ್ತವೋ, ಆ ಹುದ್ದೆಗಳಿಗೆ ಈ ಸೂಪರ್‌ನ್ಯೂಮರರಿ ಪೋಸ್ಟ್‌ಗಳನ್ನು ವರ್ಗಾವಣೆ ಮಾಡಿ ಹಾಕುತ್ತಾ ಇದ್ದೇವೆ. ಕಷ್ಟ ಏನಾಗಿದೆ ಎಂದರೆ, ಅವರು ಹೇಳಿದ ಹಾಗೆ ಸೂಪರ್‌ನ್ಯೂಮರರಿ ಪೋಸ್ಟ್‌ನಲ್ಲಿ ಇಲ್ಲದವರಿಗೆ ಅಸ್ತಿತ್ವವೇ ಇಲ್ಲ. ವಾಸ್ತವವಾಗಿ ಅಸ್ತಿತ್ವ ಇಲ್ಲ. ಅಸ್ತಿತ್ವ ಕೊಡುವುದಕ್ಕೆ ಸಾಧ್ಯವಿಲ್ಲ, ಕಾರಣವೇನೆಂದರೆ ನೌಕರಿ ಖಾಲಿ ಇಲ್ಲ. ಇದು ಇರತಕ್ಕಂಥ ಸ್ಥಿತಿ. ಆದ್ದರಿಂದ, ಅವರಿಗೆ ಸಂಬಳ ಮತ್ತು ಭತ್ಯೆಗಳಲ್ಲಿ ಯಾವ ತೊಂದರೆಗಳೂ ಆಗಿಲ್ಲ. ಅವರಿಗೆ ಸಂಬಳ ಸಿಗುತ್ತದೆ, ಭತ್ಯೆಗಳೂ ಸಿಗುತ್ತದೆ. ಬಡ್ತಿ ವಿಚಾರದಲ್ಲಿ ತೊಂದರೆ ಇದೆ. ಇದನ್ನು ಪರಿಹರಿಸುವುದಕ್ಕಾಗಿಯೇ ಸಮಿತಿ ಮಾಡಿದ್ದೇವೆ. ಸಾಧ್ಯವಾದಷ್ಟು ಬೇಗ, ಅವರೆಲ್ಲರನ್ನೂ ತುಂಬುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.